**ಓ.ಎಸ್. ನಂ. 146/2022** **ಪಿ.ಡಬ್ಲ್ಯೂ- 1**

**<u>ಸಾಕ್ಷಿಯನ್ನು ದಿನಾಂಕ 24.11.2023 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

ಮುಂದುವರೆದ ಪಾಟೀ ಸವಾಲುಃ 1 ರಿಂದ 3 ನೇ ಪ್ರತಿವಾದಿ ಪರ ಶ್ರೀ ಎನ್.ಆರ್.ಎನ್ ವಕೀಲರು ಸಮಯವಕಾಶ ಕೋರಿದ್ದು, ಸಕಾರಣ ಇಲ್ಲದಿರುವುದರಿಂದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

ಪಾಟೀ ಸವಾಲುಃ 4 ರಿಂದ 6 ನೇ ಪ್ರತಿವಾದಿ ಪರ ವಕೀಲರು ಗೈರುಹಾಜರಾಗಿದ್ದು ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

<u>ಪಾಟೀ ಸವಾಲುಃ 7 ನೇ ಪ್ರತಿವಾದಿ ಪರ ಶ್ರೀ ಜಿ.ವಿ.ಜಿ ವಕೀಲರಿಂದಃ</u>

ನಾನು ಸರಗೂರಿನಲ್ಲಿ ಪಿ.ಯು.ಸಿ ವಿದ್ಯಾಭ್ಯಾಸ ಮಾಡಿರುತ್ತೇನೆ. ಪಿ.ಯು.ಸಿ ವಿದ್ಯಾಭ್ಯಾಸ ಮುಗಿದು 17 ವರ್ಷವಾಗಿರುತ್ತದೆ. ನಾನು ಈಗ ಮೈಸೂರಿನಲ್ಲಿ ವಾಸವಾಗಿರುತ್ತೇನೆ. ನಾನು ಮೈಸೂರಿನಲ್ಲಿ ವಾಸ ಮಾಡಲು ಪ್ರಾರಂಭಿಸಿ 18 ವರ್ಷವಾಗಿರುತ್ತದೆ. ನನಗೆ ಪ್ರತಿವಾದಿಯರು ಮತ್ತು ದಾವಆಸ್ತಿಯ ಚಕ್ಕುಬಂದಿಯಲ್ಲಿ ಇರುವ ವ್ಯಕ್ತಿಗಳ ಪರಿಚಯವಿರುತ್ತದೆ. ನಾನು ಎಲ್ಲಾ ವಾದಿಯರ ಪರವಾಗಿ ಸಾಕ್ಷಿ ನುಡಿಯುತ್ತಿದ್ದೇನೆ. ನನ್ನ ತಂದೆ ತೀರಿಕೊಂಡು 20 ವರ್ಷವಾಗಿರುತ್ತದೆ. ನನ್ನ ತಂದೆ ತೀರಿಕೊಂಡ ನಂತರ ನಮ್ಮ ಕುಟುಂಬದ ವ್ಯವಹಾರವನ್ನು ನನ್ನ ತಾಯಿ ನೋಡಿಕೊಳ್ಳುತ್ತಿದ್ದರು. ನನ್ನ ತಾಯಿಗೆ ಎಲ್ಲಾ ದಾವಆಸ್ತಿಗಳ ಬಗ್ಗೆ ಮಾಹಿತಿ ಇರುತ್ತದೆ. ಸರ್ವೆ ನಂ. 20/1 ರಲ್ಲಿ ಎಂ.ಆರ್ 10/98-99 ರಂತೆ ದಾನಪತ್ರದ ಆಧಾರದ ಮೇಲೆ ನನ್ನ ತಂದೆಗೆ 3-20 ಎಕರೆ ಆಸ್ತಿಯ ಖಾತೆಯಾಗಿರುತ್ತದೆ ಎಂದರೆ ಸರಿ. ಸದರಿ ದಾನವಾಗಿರುವ ಆಸ್ತಿಯಲ್ಲಿ ನನ್ನ ತಂದೆ ಮತ್ತು ನಾವು ಸ್ವಾಧೀನ ಹೊಂದಿ ವ್ಯವಸಾಯ ಮಾಡಿಕೊಂಡು ಬರುತ್ತಿದ್ದೇವೆ ಎಂದರೆ ಸರಿ. ನನ್ನ ತಂದೆ ಹೆಸರಿಗೆ ಆಗಿರುವ ದಾನಪತ್ರವನ್ನು ನಾನು ನೋಡಿರುತ್ತೇನೆ. ಸದರಿ ದಾನಪತ್ರದಲ್ಲಿ ನನ್ನ ತಂದೆ ಕೆಂಪಮಾಲೇಗೌಡರಿಗೆ ದತ್ತುಮಗ ಎಂದು ಬರೆದಿರುತ್ತದೆ ಎಂದರೆ ಸರಿ. ಸದರಿ ದಾನಪತ್ರದಲ್ಲಿ ಕೆಂಪಮಾಲೇಗೌಡರ ಬೇರೆ ಸ್ಥಿರ ಮತ್ತು ಚರ ಆಸ್ತಿಗಳ ಬಗ್ಗೆ ಬರೆಯಲಾಗಿರುತ್ತದೆ ಎಂದರೆ ಸರಿಯಲ್ಲ. ಸದರಿ ದಾನಪತ್ರದಲ್ಲಿ ಕೆಂಪಮಾಲೇಗೌಡರಿಗೆ ಮಕ್ಕಳಿರುವುದಿಲ್ಲ ಎಂದು ಬರೆದಿರುತ್ತಾರೆ ಎಂದರೆ ಸರಿ. 1998-99 ರಿಂದಲೂ ದಾನಪತ್ರವಾಗಿರುವ 3-20 ಆಸ್ತಿಯ ಬಗ್ಗೆ ನನ್ನ ತಂದೆ ಹಾಗೂ ನನಗೆ ಮಾಹಿತಿ ಇರುತ್ತದೆ ಎಂದರೆ ಸಾಕ್ಷಿದಾರರು ಅಷ್ಟು ಮಾಹಿತಿ ಇರಲಿಲ್ಲ ಎನ್ನುವರು. 1945 ರಲ್ಲಿ ಆಗಿರುವ ದಾನಪತ್ರದ ಆಧಾರದ ಮೇರೆಗೆ ನನ್ನ ತಂದೆ 1998-99 ರಲ್ಲಿ ಅರ್ಜಿ ಸಲ್ಲಿಸಿ ಅವರ ಹೆಸರಿಗೆ ಎಂ.ಆರ್ 10/98-99 ರಂತೆ ಖಾತೆ ಮಾಡಿಸಿಕೊಂಡಿರುತ್ತಾರೆ ಎಂದರೆ ಸರಿ. ಸದರಿ ಖಾತೆ ಮಾಡಿಸಿಕೊಂಡ ಆಸ್ತಿಯಲ್ಲಿ ನನ್ನ ತಂದೆ ಸ್ವಾಧೀನ ಹೊಂದಿ ವ್ಯವಸಾಯ ಮಾಡಿಕೊಂಡು ಬರುತ್ತಿದ್ದರು ಎಂದರೆ ಸರಿ.

ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುವ ದಾಖಲಾತಿಗಳನ್ನು ಪಡೆದುಕೊಳ್ಳಲು ಅರ್ಜಿಯನ್ನು ನಾನೇ ನೀಡಿರುತ್ತೇನೆ. ನಿಪಿ2 ರಲ್ಲಿ ಸರ್ವೆ ನಂ.20/2 ರ ಆಸ್ತಿಯು ಮಾದೇಗೌಡ ಬಿನ್ ಚಾಮೇಗೌಡರಿಗೆ ಕ್ರಯದ ಮೂಲಕ ಆಸ್ತಿ ಬಂದಿರುತ್ತದೆ ಎಂದು ನಮೂದಾಗಿರುತ್ತದೆ ಎಂದರೆ ಸರಿ. ನಿಪಿ8 ಇ.ಸಿ ಯನ್ನು ನಾನೇ ಪಡೆದುಕೊಂಡಿರುತ್ತೇನೆ. ಸದರಿ ಇ.ಸಿ ಯನ್ನು ದಿನಾಂಕ 1.4.1930 ರಿಂದ 31.3.2004 ಅವಧಿಯವರೆಗೆ ಪಡೆದುಕೊಂಡಿರುತ್ತೇನೆ ಎಂದರೆ ಸರಿ. ನಿಪಿ8 ರಲ್ಲಿ ಮಾದೇಗೌಡರ ಹೆಸರಿಗೆ 1933 ರಲ್ಲಿ ಆಗಿರುವ ಕ್ರಯಪತ್ರವನ್ನು ನಾನು ಉಪನೋಂದಣಾಧಿಕಾರಿ ರವರ ಜೊತೆ ಶಾಮೀಲಾಗಿ ನಮೂದು ಮಾಡಿಸಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ತಂದೆ ತೀರಿಕೊಂಡ ನಂತರ ನನ್ನ ತಾಯಿ 1 ನೇ ವಾದಿ ಸರ್ವೆ ನಂ.20/1 ರಲ್ಲಿ 3-20 ಎಕರೆ ಆಸ್ತಿಯನ್ನು ಎಂ.ಆರ್ 10/2002-03 ರಂತೆ ದಿನಾಂಕ 9.5.2003 ರಂದು ಖಾತೆ ಮಾಡಿಸಿಕೊಂಡಿರುತ್ತಾರೆ ಎಂದರೆ ಸರಿ. ಸದರಿ ಖಾತೆಯನ್ನು ಮಾಡಿಸಿಕೊಳ್ಳಲು ನನ್ನ ತಾಯಿ ಅರ್ಜಿ ನೀಡಿ ನಂತರ ಪೌತಿ ಖಾತೆ ಮಾಡಿಸಿಕೊಂಡಿರುತ್ತಾರೆ ಎಂದರೆ ಸರಿ. ಯಾವುದೇ ಬ್ಯಾಂಕಿನವರು ದಾಖಲಾತಿಗಳನ್ನು ಪರಿಶೀಲನೆ ಮಾಡಿ, ಆಸ್ತಿಯ ಸ್ವಾಧೀನ ಮತ್ತು ಬೆಳೆಯನ್ನು ನೋಡಿ ಸಾಲ ನೀಡುತ್ತಾರೆ ಎಂದರೆ ಸರಿ. ನನ್ನ ತಾಯಿ ನಿಪಿ10 ರಲ್ಲಿ ನಮೂದಾಗಿರುವ ದಿನಾಂಕ 4.8.2009 ರಂದು ಎಸ್.ಬಿ.ಎಂ, ಸರಗೂರಿನಲ್ಲಿ 3-20 ಎಕರೆ ಆಸ್ತಿಯ ಮೇಲ ಸಾಲ ಪಡೆದಿರುತ್ತಾರೆ ಎಂದರೆ ಸರಿ. ನನ್ನ ತಾಯಿ 3-20 ಎಕರೆ ಆಸ್ತಿಯ ಮೇಲೆ ಸಾಲ ಪಡೆದು, ಸದರಿ ಆಸ್ತಿಯ ಸ್ವಾಧೀನ ಹೊಂದಿರುತ್ತಾರೆ ಎಂದರೆ ಸರಿ. ನನ್ನ ತಾಯಿಗೆ ಯಾವ ಸರ್ವೆ ನಂಬರಿನಲ್ಲಿ ಎಷ್ಟು ಆಸ್ತಿಗೆ ಸ್ವಾಧೀನ ಇರುತ್ತೇವೆ ಎಂಬ ಮಾಹಿತಿ ಇರುತ್ತದೆ ಎಂದರೆ ಸಾಕ್ಷಿದಾರರು ಜಾಸ್ತಿ ಆಸ್ತಿಯಲ್ಲಿ ಸ್ವಾಧೀನ ಹೊಂದಿ ವ್ಯವಸಾಯ ಮಾಡುತ್ತಿದ್ದೆವು ಎನ್ನುವರು. ಯಾವುದೇ ಆಸ್ತಿ ಖಾತೆ ಮಾಡಿಸಿಕೊಳ್ಳಲು ಸರ್ವೆ ನಂಬರ್ ಮತ್ತು ವಿಸ್ತೀರ್ಣವನ್ನು ನಮೂದಿಸಿ ಅರ್ಜಿ ನೀಡುತ್ತೇವೆ ಎಂದರೆ ಸರಿ. ಆ ರೀತಿಯಲ್ಲಿ ಅರ್ಜಿ ನೀಡುವಾಗ ಆಸ್ತಿಯ ಸ್ವಾಧೀನದ ಬಗ್ಗೆ ಮತ್ತು ಸರ್ವೆ ನಂಬರಿನ ಬಗ್ಗೆ ಅರ್ಜಿದಾರರಿಗೆ ಮಾಹಿತಿ ಇರುತ್ತದೆ ಎಂದರೆ ಸರಿ. 2009 ರಲ್ಲಿ ನನ್ನ ತಾಯಿ ಸಾಲ ಪಡೆದುಕೊಂಡಾಗ ನಾನು ಅಪ್ರಾಪ್ತ ವಯಸ್ಕನಾಗಿದ್ದೆ ಎಂದರೆ ಸಾಕ್ಷಿದಾರು ಪ್ರಾಪ್ತ ವಯಸ್ಕನಾಗಿದ್ದೆ, ಅದರೆ ಸಾಲ ಪಡೆದಿರುವ ಬಗ್ಗೆ ಮಾಹಿತಿ ಇರುವುದಿಲ್ಲ ಎನ್ನುವರು. ಅದೇ ರೀತಿ ನನ್ನ ತಾಯಿ ದಿನಾಂಕ 9.3.2018 ರಂದು ಸರಗೂರಿನ ಪ್ರಾಥಮಿ ಕೃಷಿ ಪತ್ತಿನ ಸಹಕಾರ ಸಂಘದಲ್ಲಿ 3-20 ಎಕರೆ ಆಸ್ತಿಯ ಮೇಲೆ ಸಾಲ ಪಡೆದಿರುತ್ತಾರೆ ಎಂದರೆ ಸರಿ. 2018 ರಲ್ಲಿ ನನಗೆ ಮತ್ತು ಉಳಿದ ವಾದಿಯರಿಗೆ 3-20 ಎಕರೆ ಆಸ್ತಿಯ ಸ್ವಾಧೀನದ ಬಗ್ಗೆ ಮಾಹಿತಿ ಇರುತ್ತದೆ ಎಂದರೆ ಸರಿ.

ಸರ್ವೆ ನಂ.20/1 ರ 8-13 ಎಕರೆ ಆಸ್ತಿಯ ಖಾತೆಯು 2 ನೇ ಪ್ರತಿವಾದಿ ಹೆಸರಿನಲ್ಲಿರುತ್ತದೆ ಎಂದರೆ ಸರಿ. ಸರ್ವೆ ನಂ.20/2 ರ 5-30 ಎಕರೆ ಅಸ್ತಿಯ ಖಾತೆಯು 7 ನೇ ಪ್ರತಿವಾದಿ ಹೆಸರಿಗೆ ಆಗಿರುತ್ತದೆ ಎಂದರೆ ಸರಿ. ಸಾಕ್ಷಿದಾರರು ಮುಂದುವರಿದು ನನ್ನ ತಾತ 4-20 ಎಕರೆ ಜಮೀನನ್ನು ಮಾತ್ರ ಕ್ರಯಪತ್ರ ಮಾಡಿರುತ್ತಾರೆ ಎನ್ನುವರು. ಸರ್ವೆ ನಂ.20/3 ರ 3-20 ಎಕರೆ ಆಸ್ತಿಯ ಖಾತೆಯು ನನ್ನ ತಾಯಿಯ ಹೆಸರನಲ್ಲಿರುತ್ತದೆ ಎಂದರೆ

ಸರಿ. ಸಾಕ್ಷಿದಾರರು ಮುಂದುವರಿದು ಇತ್ತಿಚೆಗೆ ಖಾತೆಯಾಗಿರುತ್ತದೆ ಎನ್ನುವರು. 2021 ರಲ್ಲಿ ಪೋಡಾಗಿ ಆ ರೀತಿ ಖಾತೆಯಾಗಿರುತ್ತದೆ ಎಂದರೆ ಸರಿ. ಆ ರೀತಿ ದುರಸ್ತಿಯಾಗುವ ಪೂರ್ವದಲ್ಲಿ ಸರ್ವೆ ನಂ.20/1 ರಲ್ಲಿ 8-13 ಎಕರೆಯು 2 ನೇ ಪ್ರತಿವಾದಿಯ ಹೆಸರಿನಲ್ಲಿ ಮತ್ತು 3-20 ಎಕರೆ ನನ್ನ ತಾಯಿಯ ಹೆಸರಿನಲ್ಲಿ ಖಾತೆಯಿತ್ತು ಎಂದರೆ ಸರಿ. ಅದೇ ರೀತಿ 20/2 ರಲ್ಲಿ 7 ನೇ ಪ್ರತಿವಾದಿ ಹೆಸರಿನಲ್ಲಿ 5-30 ಎಕರೆ ಜಮೀನಿನ ಖಾತೆಯಿತ್ತು ಎಂದರೆ ಸರಿ. ಸರ್ವೆ ನಂ.20/1 ರಲ್ಲಿ ನನ್ನ ತಾಯಿ ಹಾಗೂ 2 ನೇ ಪ್ರತಿವಾದಿ ಹೆಸರಿಗೆ ಒಂದೇ ಪಹಣಿಯಲ್ಲಿ ಇದ್ದುದರಿಂದ ತತ್ಕಾಲ್ ಪೋಡಿ ಮಾಡಲು ನನ್ನ ತಾಯಿ ಅರ್ಜಿ ಸಂಖ್ಯೆ 26081019855017 ರಂತೆ ಅರ್ಜಿ ನೀಡಿರುತ್ತಾರೆ ಎಂದರೆ ಸರಿ. ಸದರಿ ಅರ್ಜಿಯಲ್ಲಿ ನನ್ನ ತಾಯಿ 3-20 ಎಕರೆಯಲ್ಲಿ ಸ್ವಾಧೀನದಲ್ಲಿರುತ್ತೇನೆ, ತತ್ಕಾಲ್ ಪೋಡಿ ಮಾಡಿಕೊಡಲು ಅರ್ಜಿ ನೀಡಿರುತ್ತಾರೆ ಎಂದರೆ ಸರಿಯಲ್ಲ. ತತ್ಕಾಲ್ ಪೋಡಿಯಂತೆ ಅರ್ಜಿ ನೀಡಿದ ನಂತರ ಆಜುಬಾಜುದಾರರಾದ 2 ನೇ ಪ್ರತಿವಾದಿ ಹಾಗೂ 7 ನೇ ಪ್ರತಿವಾದಿಗೆ ಸರ್ವೆ ಇಲಾಖೆಯವರು 3-20 ಎಕರೆ ಜಮೀನಿನ ಅಳತೆ ಮಾಡುವ ಬಗ್ಗೆ ನೋಟಿಸ್ ನೀಡಿ ನೀಡಿರುತ್ತಾರೆ ಎಂದರೆ ಸರಿ. ಆ ರೀತಿ ನೋಟಿಸ್ ನೀಡಿ ನನ್ನ, ನನ್ನ ತಾಯಿ, 2 ಮತ್ತು 7 ನೇ ಪ್ರತಿವಾದಿಯರ ಸಮಕ್ಷಮ 3-20 ಎಕರೆ ಜಮೀನಿನ ಅಳತೆಯನ್ನು ಮಾಡಿರುತ್ತಾರೆ ಎಂದರೆ ಸಾಕ್ಷಿದಾರರು ಅಳತೆಯ ಸಮಯದಲ್ಲಿ ನಾವು ಹೋಗಿರುವುದಿಲ್ಲ ಎನ್ನುವರು. ಅಳತೆಯಾದ ನಂತರ ಸ್ವಾಧೀನದಲ್ಲಿರುವ ಆಸ್ತಿಗೂ ಸರ್ವೆ ನಂಬರಿಗೂ ವ್ಯತ್ಯಾಸವಿದ್ದುದರಿಂದ ಎ.ಡಿ.ಎಲ್.ಆರ್, ಹೆಚ್.ಡಿ.ಕೋಟೆ ರವರು ದಿನಾಂಕ 14.8.2020 ರಂದು ನನ್ನ ತಾಯಿಗೆ ಹಿಂಬರಹ ನೀಡಿರುತ್ತಾರೆ ಎಂದರೆ ಸರಿಯಲ್ಲ.

ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು, ಸಮಯ ನೀಡಲಾಯಿತು.

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸಾ.ಸ.ಇ.ಒ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ
ಹೆಚ್.ಡಿ.ಕೋಟೆ.